'ಪ್ರೀತಿಸದವ ಪ್ರೀತಿ ಗೊತ್ತಿರದವ, ಗವಿಯೊಳಗೆ ಕುಳಿತರೂ ಕವಿಯಾಗಲಾರ, ಕಲಾವಿದನಾಗಲಾರ, ಒಬ್ಬ ಒಳ್ಳೆಯ ಮನುಷ್ಯನಂತೂ ಆಗಲಾರ' ಈ ಹಿನ್ನೆಲೆಯಲ್ಲಿ ಬಂಡಾಯ ಕವಿತೆಗಳ ಜೊತೆ ಪ್ರೀತಿಯ ಕವಿತೆಗಳ ಜುಗಲ್‌ಬಂದಿ ನಡೆದಿದೆ ಎಂಬುದು ನನ್ನ ಭಾವನೆ. ಸಂಗೀತದೊಂದಿಗೆ, ರಾಗಬದ್ಧವಾಗಿ ಹಾಡಿದ್ದರಿಂದ ರೋಮ್ಯಾಂಟಿಕ್ ಅನ್ನಿಸಿದ ಕವಿತೆಗಳು ಜನಪ್ರಿಯವಾಗಿರಬಹುದು.

◆ **ಬಂಡಾಯ ಚಳವಳಿಯಲ್ಲಿ ಗುರುತಿಸಿಕೊಂಡರೂ ನಿಮ್ಮ ಕವಿತೆಗಳಲ್ಲಿ ಇರಬೇಕಾದ ಆಕ್ರೋಶ, ಸಂಘರ್ಷ, ಇಲ್ಲ. ಸಹಜ ಮಾನವೀಯ ಕಾವ್ಯ ನಿಮ್ಮದು. ನಿಜಕ್ಕೂ ನಿಮ್ಮ ಕಾವ್ಯ ಮನೋಧರ್ಮ, ಜೀವನ ದೃಷ್ಟಿ ಏನು?**

ಹಾಗೇನೂ ನನಗೆ ಅನ್ನಿಸಿಲ್ಲ. ಹಾಗೆ ನೋಡಿದರೆ ಚಳವಳಿಯೇ ಬೇರೆ, ಕಾವ್ಯವೇ ಬೇರೆ. ಆಕ್ರೋಶ, ಸಂಘರ್ಷ, ವ್ಯಂಗ್ಯಗಳೇ, ಕಾವ್ಯವಾಗುವುದಿಲ್ಲ. ಕಾವ್ಯದಿಂದಲೇ ಕ್ರಾಂತಿಯಾಗುವುದಿಲ್ಲ. ಆದರೆ ಜನರ ನಿರ್ಣಾಯಕ ಹೋರಾಟಕ್ಕೆ ಕಾವ್ಯ ಸ್ಫೂರ್ತಿಯಾಗಬಹುದಷ್ಟೇ. ನಾವೆಲ್ಲರೂ ಮನುಷ್ಯರು. ಮನುಷ್ಯ ಮನುಷ್ಯನಂತೆ ಬದುಕಬೇಕು. ಅದು ಕಾವ್ಯ, ಸಾಹಿತ್ಯದಲ್ಲಿ ಅನುರಣಿಸಬೇಕು. ಸ್ಥಾಪಿತ ಮತ್ತು ರೂಪಿತ ಸಿದ್ಧಾಂತಗಳನ್ನು ಮುರಿದು ಹೊಸದನ್ನು ಕಟ್ಟುವುದೇ ನಿಜವಾದ ಕಾವ್ಯ. ಅಲ್ಲಿ ಮನುಷ್ಯತ್ವಕ್ಕೆ ಬೆಲೆ ಇರಬೇಕು. ನನ್ನ ದೃಷ್ಟಿಯಲ್ಲಿ ಇದೇ ನಿಜವಾದ ಸಾಹಿತ್ಯ. ಸಾಮರಸ್ಯದ ಬದುಕಿಗೆ ಆಸ್ಪದ ಕೊಡದ ಕಾವ್ಯ ಅದು ಹೇಗೆ ಮಾನವೀಯ ಕಾವ್ಯವಾಗುತ್ತದೆ? ಎಲ್ಲ ತರತಮಗಳನ್ನು ಬದಿಗಿರಿಸಿ ಎಲ್ಲ ಒಳ್ಳೆಯದು ಅಖಂಡವಾಗಬೇಕು. ಇದು ನನ್ನ ಕಾವ್ಯದ ಮನೋಧರ್ಮ. 'ಮಗು ಯಾವುದಾದರೇನು, ಯಾರದಾದರೇನು, ಮಗು ಮಗುವೇ' ಅಲ್ಲವೇ? ಮೊದಲು ನನಗೆ ನಾನೇ ಆದರ್ಶವಾಗಬೇಕು. ನನಗೇ ನಾನೇ ಮಾದರಿಯಾಗಬೇಕು. ಇದು ನನ್ನ ಜೀವನ ದೃಷ್ಟಿ.

◆ **ನಿಮ್ಮ ಕಾವ್ಯದ ಪ್ರೀತಿಯ ಆಯಾಮ ಬೇರೆ ಬಗೆಯದು. ಅದರಲ್ಲಿ ಅರ್ಪಣಾ ಮನೋಭಾವವಾಗಲಿ, ನಿವೇದನೆಯಾಗಲಿ ಇಲ್ಲ. ಪ್ರೀತಿ ಹಕ್ಕು ಅಥವಾ ಅಧಿಕಾರ ಎಂಬ ಭಾವ ವ್ಯಕ್ತವಾಗುತ್ತದೆ. ಇದಕ್ಕೆ ಏನು ಕಾರಣ?**

ಇದಕ್ಕೆ ಮೂಲ ಕಾರಣ ನಾನು ಬೆಳೆದು ಬಂದ ಪರಿಸರ, ಸಮಾಜ ನನ್ನನ್ನು ನೋಡಿದ, ನಡೆಸಿಕೊಂಡ ರೀತಿಯೂ ಇರಬಹುದು. ಕಾವ್ಯದಲ್ಲಿ ಅರ್ಪಣಾ ಮನೋಭಾವ ನಿವೇದನೆಗಿಂತಲೂ ಪ್ರೀತಿಗೆ ಆದ್ಯತೆ ಇರಬೇಕು. ಸಂಘರ್ಷ, ಹೋರಾಟ, ಅಧಿಕಾರದಿಂದ ಆಗದ್ದು ಪ್ರೀತಿಯಿಂದ ಆಗುತ್ತದೆ. ಪ್ರೀತಿಯದು ತಣ್ಣಗಿನ ಹಕ್ಕೊತ್ತಾಯ. ಇದಕ್ಕೆ ಗೌರವ ಇದೆ. ಅಧಿಕಾರದ್ದು ಕುರ್ಚಿಯ ಹಕ್ಕೊತ್ತಾಯ. ಇಲ್ಲಿ ಗೌರವ ಗೌಣವಾಗುತ್ತದೆ.

◆ **'ಬಡವನಾದರೆ ಏನು ಪ್ರಿಯೆ ಕೈತುತ್ತು ತಿನಿಸುವೆ' ಎಂಬ ಕವಿತೆ ಕನ್ನಡಿಗರ ಬಾಯಲ್ಲಿ ನಲಿಯುತಿದೆ. ಇದು ನಿಮ್ಮನ್ನು ಜನಪದ ಕವಿಯನ್ನಾಗಿಸಿದೆ. ಇದಕ್ಕೆ ದೊರಕಿರುವ ಅಪಾರ ಜನಪ್ರಿಯತೆಯ ಬಗ್ಗೆ ಹೇಳಿ.**

1990ರ ಆಸುಪಾಸಿನಲ್ಲಿ ಬರೆದ ಈ ಕವಿತೆ 1996ರಲ್ಲಿ ದೂರದರ್ಶನದ 'ಚಂದನ' ವಾಹಿನಿಯಲ್ಲಿ 'ಗೀತ ಮಾಧುರಿ' ಧಾರಾವಾಹಿಗೆ ಆಯ್ಕೆಯಾಗಿತ್ತು. ಧಾರಾವಾಹಿಯ ನಿರ್ದೇಶಕರು ಟಿ.ಎಸ್. ನಾಗಾಭರಣ, ಸ್ವರ ಸಂಯೋಜನೆ ಸಿ. ಅಶ್ವತ್ಥ್ ಅವರದು. ಕುವೆಂಪು, ಬೇಂದ್ರೆ, ಪು.ತಿ.ನ. ಮುಂತಾದ 16 ಪ್ರಸಿದ್ಧ ಕವಿಗಳ ಕವಿತೆಗಳ ಧಾರಾವಾಹಿ ಅದು. ಕೊನೆಯ ಕಂತಿನಲ್ಲಿ ಸಿದ್ಧಲಿಂಗಯ್ಯ, ಬಿ.ಟಿ. ಲಲಿತಾ ನಾಯಕ, ಚಂಪಾ ಅವರಂತಹ ಪ್ರಸಿದ್ಧರ ಸಾಲಿನಲ್ಲಿ ನಾನೂ ಸೇರಿದ್ದು ನನ್ನ ಕವಿತೆಯಷ್ಟೇ